**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5037/2023 ಫ್ರಾಸಾ-31
ಚಾಸಾ-24

ದಿನಾಂಕಃ 30-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರಾಜಶೇಖರ್ |
| **ತಂದೆಯ / ಗಂಡನ ಹೆಸರು** | ಓಬಳಾಪತಿ |
| **ವಯಸ್ಸು** | 35 |
| **ಉದ್ಯೋಗ** | ಕೂಲಿ |
| **ವಾಸಸ್ಥಳ** | ಗೌಡತಿಮ್ಮನಹಳ್ಳಿ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನ್ಯಾಯಾಲಯದಲ್ಲಿರುವ ಅಮಾನತ್ತು ಪಂಚನಾಮೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ನಿಪಿ-33 ಎಂದು, ಸಾಕ್ಷಿ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು. ಸುಮಾರು 2 ವರ್ಷಗಳ ಹಿಂದೆ ನಾನು ಊಟ ಮಾಡಿಕೊಂಡು ಬರುತ್ತಿರುವಾಗ ಪೊಲೀಸರು ವೆ.ಎನ್. ಹೊಸಕೋಟೆಗೆ ಕರೆದುಕೊಂಡು ಹೋಗಿ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ನಿಪಿ-33 ರಲ್ಲಿ ಬರದೆ ವಿಷಯ ನನಗೆ ಗೊತ್ತಿಲ್ಲ. ಪೊಲೀಸರ ವಶದಲ್ಲಿದ್ದ ಯಾರನ್ನೂ ನನಗೆ ತೋರಿಸಿರುವುದಿಲ್ಲ ನನ್ನ ಮುಂದೆ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿಯನ್ನು ನಾನು ನೋಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಒಂದು ಪೊಟೋವನ್ನು ನೋಡಿದ್ದು, ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ, ಸದರಿ ಪೊಟೋವನ್ನು ನಿಪಿ-34 ಎಂದು ಗುರುತಿಸಲಾಯಿತು. ಸದರಿ ಪೊಟೋದಲ್ಲಿ ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿ

ಬಟ್ಟೆಯನ್ನು ಪೊಲೀಸರ ಮುಂದೆ ಹಾಜರುಪಡಿಸುತ್ತಿದ್ದಾನೆ. ಆರೋಪಿ ಒಂದು ಟವಲ್ ಮತ್ತು ಶರ್ಟ್ ಹಾಜರುಪಡಿಸಿರುತ್ತಾನೆ. ಆರೋಪಿ ಯಾವ ಕಾರಣಕ್ಕಾಗಿ ಬಟ್ಟೆ ಹಾಜರುಪಡಿಸಿರುತ್ತಾನೆಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಎರಡು ಬಿಳಿ ಬಟ್ಟೆಯ ಪ್ಯಾಕ್ ಹಾಜರುಮಾಡಿದ್ದು ಅವುಗಳ ಮೇಲೆ ಸೀಲ್ ಸುಸ್ಥಿತಿಯಲ್ಲಿರುತ್ತದೆ. ಸದರಿ ಬಿಳಿ ಬಟ್ಟೆಯ ಸೀಲ್ ಆಗಿರುವ ಎರಡು ಪ್ಯಾಕುಗಳು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿರುವ ಟವಲ್ ಮತ್ತು ಟೀ ಶರ್ಟನ್ನು ನೋಡಿ ಗುರುತಿಸಿದ ಮೇರೆಗೆ ಟವಲ್ ನ್ನು ಮು.ಮಾ-13 ಎಂದು ಟೀ ಶರ್ಟ್ ನ್ನು ಮು.ಮಾ-14 ಎಂದು ಗುರುತಿಸಲಾಯಿತು. ಬಿಳಿ ಬಟ್ಟೆಯ ಚೀಲವನ್ನು ತೋರಿಸಿದ್ದು ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ, ಸದರಿ ಬಟ್ಟೆ ಚೀಲದಲ್ಲಿ ಏನು ಇರುತ್ತದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ದಿ. 16.08.2023 ರಂದು ಮದ್ಯಾಹ್ನ 3-00 ರಿಂದ 3-45 ಗಂಟೆಯವರೆಗೂ ವೆ.ಎನ್. ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ನಿಪಿ-33 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ನಿಜ. ಆ ಸಮಯದಲ್ಲಿ ವಿ.ಸಿ. ಮುಖಾಂತರ ಹಾಜರುಪಡಿಸಿದಂತಹ ಆರೋಪಿ ಪೊಲೀಸ್ ಠಾಣೆಯಲ್ಲಿದ್ದ ಎಂದರೆ ನಿಜ. ಸದರಿ ಆರೋಪಿ ನಾನು ದಿ. 15.08.2023 ರಂದು ರಾತ್ರಿ 11-00 ಗಂಟೆಗೆ ನನ್ನ ಹೆಂಡತಿ ಲಕ್ಷೀಯನ್ನು ಒಣಕೆಯಿಂದ ಹೊಡೆದು ಸಾಯಿಸಿರುತ್ತೇನೆ ಆ ಸಮಯದಲ್ಲಿ ತಾನು ಧರಿಸಿದ ಬಟ್ಟೆಗಳು ಎಂದು ಹೇಳಿ ಬಟ್ಟೆಗಳನ್ನು ಹಾಜರಪಡಿಸಿದ ಎಂದರೆ ಸರಿಯಲ್ಲ. ಆ ದಿನ ಆರೋಪಿ ಟವಲ್ , ಟೀ ಶರ್ಟ್ ಮತ್ತು ಬರ್ಮುಡಾ ಹಾಜರುಪಡಿಸಿರುತ್ತಾನೆ ಎಂದರೆ ನಿಜ. ನ್ಯಾಯಾಲಯದ ಮುಂದೆ ಇರುವ ಒಂದು ಬಿಳಿ ಬಟ್ಟೆಯ ಪ್ಯಾಕ್ ಹಾಜರುಮಾಡಿದ್ದು ಅದರ ಮೇಲೆ ಸೀಲ್ ಸುಸ್ಥಿತಿಯಲ್ಲಿರುತ್ತದೆ. ಸದರಿ ಬಿಳಿ ಬಟ್ಟೆಯ ಸೀಲ್

ಆಗಿರುವ ಒಂದು ಪ್ಯಾಕು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿರುವ ಬರ್ಮುಡಾ ಸಾಕ್ಷಿಗೆ ತೋರಿಸಲಾಗಿ , ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಬರ್ಮುಡಾವನ್ನು ಮು.ಮಾ-15 ಎಂದು ಗುರುತಿಸಲಾಯಿತು. ಆರೋಪಿ ತಾನು ಲಕ್ಷ್ಮೀಯನ್ನು ಕೊಲೆ ಮಾಡುವ ಸಮಯದಲ್ಲಿ ಧರಿಸಿ ಬಟ್ಟೆಗಳು ಎಂದು ಹೇಳಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು,ಶ್ರೀ. ಪಿ.ಎನ್.ಆರ್. ವಕೀಲರಿಂದ ಆರೋಪಿ ಪರವಾಗಿ:-</u>**

ಪೊಲೀಸರಿಗೆ ಬಟ್ಟೆಗಳನ್ನು ಯಾರು ಕೊಟ್ಟಿರುತ್ತಾರೆಂದು ನಾನು ನೋಡಿಲ್ಲ. ಮು.ಮಾ-13 ರಿಂದ 15 ಬಟ್ಟೆಗಳನ್ನು ನಾನು ಯಾವತ್ತೂ ಹೊರಗಡೆ ನೋಡಿರುವುದಿಲ್ಲ. ಬಟ್ಟೆಗಳ ಬಣ್ಣದ ಬಗ್ಗೆ ನನ್ನ ಮುಂದೆ ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ನನ್ನ ಮುಂದೆ ಪೊಲೀಸರು ಬಟ್ಟೆಗಳನ್ನು ಚೀಲದಲ್ಲಿ ಹಾಕಿ ಪ್ಯಾಕ್ ಮಾಡಿ ಸೀಲ್ ಮಾಡಿರುವುದಿಲ್ಲ. ಸದರಿ ಬಟ್ಟೆಗಳು ಯಾರಿಗೆ ಸಂಬಂಧಪಟ್ಟಿದ್ದು ಯಾರೂ ನನಗೆ ಹೇಳಿರುವುದಿಲ್ಲ , ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ ಎಂದರೆ ನಿಜ. ನನಗೆ ಬಟ್ಟೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ನಿಜ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**